# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 504 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12/12/2024 |
| ಉತ್ತರಿಸುವ ಸಚಿವರು | : | ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಧುಗಿರಿ ಏಕಶಿಲಾ ಬೆಟ್ಟಕ್ಕೆ ರೋಪ್-ವೇ (ಕೇಬಲ್ ಕಾರ್) ನಿರ್ಮಿಸುವ ಕಾಮಗಾರಿಯ ಟೆಂಡರ್ ಯಾವ ಹಂತದಲ್ಲಿದೆ; ಇದ್ದಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು) | ಮಧುಗಿರಿ ಏಕಶಿಲಾ ಬೆಟ್ಟಕ್ಕೆ ರೋಪ್-ವೇ (ಕೇಬಲ್ ಕಾರ್) ನಿರ್ಮಿಸುವ ಕಾಮಗಾರಿಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಕೈಗೊಳ್ಳಲು ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್) ದಿಂದ ವಹಿವಾಟು ಸಲಹೆಗಾರರ ಆಯ್ಕೆಗಾಗಿ ಟೆಂಡರ್ ಕರೆಯಲಾಗಿರುತ್ತದೆ.<br><br>ಸದರಿ ಟೆಂಡರ್ ತಾಂತ್ರಿಕ ಬಿಡ್ ಗಳನ್ನು ದಿನಾಂಕ:26.11.2024 ರಂದು ತೆರೆಯಲಾಗಿದ್ದು, ತಾಂತ್ರಿಕ ಬಿಡ್ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ತಾಂತ್ರಿಕ ಬಿಡ್ ಪರಿಶೀಲನಾ ಕಾರ್ಯ ಕೈಗೊಂಡ ನಂತರ, ಅರ್ಹ ಬಿಡ್ಡುದಾರರ ಆರ್ಥಿಕ ಬಿಡ್ ಗಳನ್ನು ತೆರೆದು ನಿಯಮಾನುಸಾರ ಪರಿಶೀಲಿಸಿ, ಕಾರ್ಯಾದೇಶ ನೀಡಲು ಕ್ರಮವಹಿಸಬೇಕಿರುತ್ತದೆ. |
| ಆ) | ರೋಪ್-ವೇ(ಕೇಬಲ್ ಕಾರ್) ನಿರ್ಮಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ವಿಳಂಬಕ್ಕೆ ಕಾರಣವೇನು; | ಕೆ.ಟಿ.ಐ.ಎಲ್. ಸಂಸ್ಥೆಯಿಂದ ರೋಪ್-ವೇ (ಕೇಬಲ್ ಕಾರ್) ನಿರ್ಮಿಸುವ ಕಾಮಗಾರಿಗೆ ಸಂಬಂಧಿಸಿದಂತೆ, ವಹಿವಾಟು ಸಲಹೆಗಾರರ ಸೇವೆ ಪಡೆಯಲು ದಿನಾಂಕ: 14.03.2024 ರಂದು ಟೆಂಡರ್ ಪ್ರಕಟಿಸಲಾಗಿತ್ತು. ಸದರಿ ಟೆಂಡರ್ ನಲ್ಲಿ ಕೇವಲ ಒಂದು ಸಂಸ್ಥೆ ಮಾತ್ರ ಭಾಗವಹಿಸಿದ್ದರಿಂದ, ಸದರಿ ಟೆಂಡರ್ ಅನ್ನು ರದ್ದುಪಡಿಸಲಾಗಿತ್ತು.<br><br>ನಂತರ, ಕೆ.ಟಿ.ಐ.ಎಲ್. ಸಂಸ್ಥೆಯಿಂದ ಹೂಡಿಕೆದಾರರ ಹಿತಾಸಕ್ತಿ ತಿಳಿದುಕೊಳ್ಳಲು Expression of Interest (EOI) ಟೆಂಡರ್ ಕರೆದಿದ್ದು, ಈ ಟೆಂಡರ್ ನಲ್ಲಿ 02 ಸಂಸ್ಥೆಗಳು ಮಧುಗಿರಿ ಬೆಟ್ಟಕ್ಕೆ ಆಸಕ್ತಿಯನ್ನು ವ್ಯಕ್ತಪಡಿಸಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ, ಮಧುಗಿರಿ ಬೆಟ್ಟ ಒಳಗೊಂಡಂತೆ, ರಾಜ್ಯದಲ್ಲಿನ ಒಟ್ಟು 11 ಪ್ರವಾಸಿ ತಾಣಗಳಿಗೆ ರೋಪ್-ವೇ ಅಳವಡಿಸಲು ವಹಿವಾಟು ಸಲಹೆಗಾರರ ಸೇವೆ ಪಡೆಯಲು ಸೂಕ್ತ ಸಂಸ್ಥೆಗಳ ಆಯ್ಕೆಗಾಗಿ ಮರು ಟೆಂಡರ್ ಅನ್ನು ದಿನಾಂಕ:29.10.2024ರಂದು ಕರೆಯಲಾಗಿತ್ತು. ಸದರಿ ಟೆಂಡರ್‌ಗೆ ಸ್ವೀಕೃತವಾಗಿರುವ ಬಿಡ್ ಗಳನ್ನು ದಿನಾಂಕ: 26.11.2024ರಂದು |

| | | |
|---|---|---|
| | | ತೆರೆಯಲಾಗಿದ್ದು, ಸ್ವೀಕೃತವಾಗಿರುವ ತಾಂತ್ರಿಕ ಬಿಡ್‌ಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. |
| ಇ) | ಮಧುಗಿರಿ ಏಕಶಿಲಾ ಬೆಟ್ಟಕ್ಕೆ (ಕೇಬಲ್ ಕಾರ್) ಯನ್ನು ಯಾವ ಕಾಲಮಿತಿಯೊಳಗೆ ರೋಪ್-ವೇ ಪೂರ್ಣಗೊಳಿಸಲಾಗುವುದು? | ವಹಿವಾಟು ಸಲಹೆಗಾರರ ಆಯ್ಕೆಗಾಗಿ ಕರೆದ ಟೆಂಡರ್‌ಗೆ ಸ್ವೀಕೃತವಾಗಿರುವ ತಾಂತ್ರಿಕ ಬಿಡ್ ಪರಿಶೀಲನೆ ಹಂತದಲ್ಲಿದ್ದು, ಸದರಿ ಟೆಂಡರ್‌ನಲ್ಲಿ ಆಯ್ಕೆಯಾಗುವ ಸಂಸ್ಥೆಗೆ ಕಾರ್ಯಾದೇಶ ನೀಡಿ, ನಿಯಮಾನುಸಾರ ಸದರಿ ಸಂಸ್ಥೆಯಿಂದ ದಾಖಲೆಗಳನ್ನು ಸಿದ್ಧಪಡಿಸಿಕೊಂಡು ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯಿಂದ ಅನುಮೋದನೆ ಪಡೆದು, ಹೂಡಿಕೆದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆದು ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಬೇಕಾಗಿದೆ. |

ಸಂಖ್ಯೆ: ಟಿಓಆರ್ 262 ಟಿಡಿವಿ 2024

(ಎಚ್.ಕೆ. ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಹಾಗೂ ಪ್ರವಾಸೋದ್ಯಮ ಸಚಿವರು